ದಿನಾಂಕ 17-12-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋದಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ನನಗೆ ದಾವಾ ಆಸ್ತಿಯ ಸಂಖ್ಯೆ ವಿಸ್ತೀರ್ಣ ಮತ್ತು ಚಕ್ಕುಬಂದಿ ಗೊತ್ತಿಲ್ಲ. ದಾವಾ ಸರ್ವೆ ನಂ.757 ರಲ್ಲಿ ಒಟ್ಟು 4 ಹಿಸ್ಸಾಗಳು ಇರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರ್ ನ ಒಟ್ಟು ವಿಸ್ತೀರ್ಣ 14 ಎಕರೆ 26 ಗುಂಟೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು 1 ನೇ ವಾದಿಯು ಯಲ್ಲಪ್ಪ ತಳವಾರ ರವರಿಂದ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಖರೀದಿಯಂತೆ 1 ನೇ ವಾದಿಯ ಹೆಸರಿಗೆ ದಾವಾ ಆಸ್ತಿ ವರ್ಗಾವಣೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಂತರ 2020-21 ನೇ ಸಾಲಿನಲ್ಲಿ ವಾದಿಗಳು ಮೌಖಿಕ ಪಾಲುವಾಟ್ನಿ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪಾಲುವಾಟ್ನಿಯಂತೆ ದಾವಾ ಆಸ್ತಿಯ ವಾದಿಗಳ ಹೆಸರಿಗೆ ಕಂದಾಯ ದಾಖಲೆಗಳಲ್ಲಿ ವರ್ಗವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

2. ಸದರಿ ಪಾಲುವಾಟ್ನಿಯಂತೆ ಉತ್ತರ ಭಾಗದ 2 ಎಕರೆ 26 ಗುಂಟೆ 1 ನೇ ವಾದಿಯ ಹಿಸ್ಸೆಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಪೂರ್ವ ಭಾಗದ 4 ಎಕರೆ ಜಮೀನು 3 ನೇ ವಾದಿಯ ಹಿಸ್ಸೆಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪಶ್ಚಿಮ ಭಾಗದ 4 ಎಕರೆ ಜಮೀನು 2 ನೇ ವಾದಿಯ ಹಿಸ್ಸೆಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಸಲ್ಲಿಸಿದ ಪ್ರತಿವಾದ ಪತ್ರದಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ಗೊತ್ತಿಲ್ಲ.

3. ನನ್ನ ಆಸ್ತಿಯನ್ನು ಯಾವಾಗ ಯಾರಿಂದ ಖರೀದಿಸಿರುತ್ತೇನೆ ಎಂಬ ಪ್ರಶ್ನೆಗೆ ಸಾಕ್ಷಿಯು ಯಾವುದೇ ಉತ್ತರ ನೀಡಿರುವುದಿಲ್ಲ. ಒಟ್ಟು 4 ಎಕರೆ ಜಮೀನು ಖರೀದಿಸಿರುತ್ತೇವೆ. ಸದರಿ ಜಮೀನು ರೈಲ್ವೆ ಇಲಾಖೆಯವರು 2 ಎಕರೆ 20 ಗುಂಟೆ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ನಂತರ ಉಳಿದ ಆಸ್ತಿಯ ಕುರಿತು ಯಾವುದೇ ಸರ್ವೆ ಅಳತೆ ಮಾಡಿಸಿರುವುದಿಲ್ಲ. ಈ ದಾವೆಯನ್ನು ಹೂಡಿರುವ ವಾದಿಗಳ ಹೆಸರು ನನಗೆ ಗೊತ್ತಿಲ್ಲ. ಆದರೆ ನನ್ನ ವಿರುದ್ಧ ಈ ದಾವೆ

ಹೂಡಿದ್ದು ಉಳಿದ ಯಾರ ವಿರುದ್ಧ ಈ ದಾವೆ ಹೂಡಲಾಗಿದೆ ಎಂದು ನನಗೆ ಗೊತ್ತಿಲ್ಲ. ಈ ದಾವೆ

ಹೂಡುವ ಪೂರ್ವದಲ್ಲಿ ವಾದಿಗಳು ಖಾಸಗಿ ಸರ್ವೆಯವರ ಮೂಲಕ ದಾವಾ ಆಸ್ತಿ ಅಳತೆ ಮಾಡಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಂತರ ದಾವಾ ಆಸ್ತಿಯನ್ನು ನಾವು ಒತ್ತುವರಿ ಮಾಡಿರುವ ಕುರಿತು ತಿಳಿಸಿರುತ್ತಾರೆ ಎಂದರೆ ಸಾಕ್ಷಿಯು ನಾವು ಯಾವುದೇ ಒತ್ತುವರಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

4. ದಿನಾಂಕ 23-12-2019 ರಂದು ತಾಲೂಕ ಸರ್ವೆಯವರ ಮೂಲಕ ಅಳತೆ ಮಾಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸರ್ವೆ ಪೂರ್ವದಲ್ಲಿ ನಮಗೆ ನೋಟೀಸನ್ನು ನೀಡಿದ್ದರು ಎಂದರೆ ಸರಿಯಲ್ಲ. ಆ ರೀತಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸರ್ವೆ ಅಳತೆ ಮಾಡಿಸಿದ ನಂತರ ವಾದಿಯು ನಮಗೆ ದಾವಾ ಆಸ್ತಿ ಬಿಟ್ಟುಕೊಡುವಂತೆ ಹಲವು ಬಾರಿ ಕೇಳಿದ್ದರು ಎಂದರೆ ಸರಿಯಲ್ಲ. ಸದರಿ ಸರ್ವೆ ಆದೇಶವನ್ನು ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ. ನಂತರ ನೋಟೀಸನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನೋಟೀಸನ್ನು ಸ್ವೀಕರಿಸಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. 1ನೇ ವಾದಿಯ ಆಸ್ತಿಯ ಪಶ್ಚಿಮಕ್ಕೆ ಹರಿಜನರ ಆಸ್ತಿ ಇದೆ ಎಂದರೆ ನನಗೆ ಗೊತ್ತಿಲ್ಲ. ಅವರು ಸಹ ಒತ್ತುವರಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದು ಪ್ರತಿವಾದ ಪತ್ರದಲ್ಲಿ ಬರೆಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ಒತ್ತುವರಿ ಮಾಡಿದ ಆಸ್ತಿಯನ್ನು ಬಿಟ್ಟುಕೊಟ್ಟ ಕಾರಣ ಅವರ ವಿರುದ್ಧ ದಾವೆ ಹೂಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಮ್ಮ ಜಮೀನಿನ ಅಳತೆಯನ್ನು ಇಂದಿಗೂ ಮಾಡಿಸಿರುವುದಿಲ್ಲ. ದಾವಾ ಆಸ್ತಿಯನ್ನು ಒತ್ತುವರಿ ಮಾಡಿಕೊಂಡಿರುವ ಬಗ್ಗೆ ತಿಳಿಯುತ್ತದೆ ಎಂಬ ಕಾರಣಕ್ಕೆ ಅಳತೆ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ವಾದಿಯರೇ ಮಾಲೀಕರಾಗಿರುತ್ತಾರೆ ಎಂದರೆ ಸರಿಯಲ್ಲ.

6. ನಮ್ಮ ಜಮೀನಿನ ಪಕ್ಕದಲ್ಲಿ ಒಡ್ಡು ಇದ್ದು ಅದು ಯಾವ ದಿಕ್ಕಿನಲ್ಲಿರುತ್ತದೆ ಎಂದು

ನನಗೆ ಗೊತ್ತಿಲ್ಲ. ಸದರಿ ಒಡ್ಡು ಇರುವ ಕುರಿತು ನಾನು ಯಾವುದೇ ದಾಖಲೆಯನ್ನು

ಹಾಜರಪಡಿಸಿರುವುದಿಲ್ಲ. ನಮ್ಮ ಮತ್ತು ವಾದಿಗಳ ಜಮೀನಿನ ನಡುವೆ ಯಾವುದೇ ಒಡ್ಡು ಇಲ್ಲ ಎಂದರೆ ಸರಿಯಲ್ಲ. ನಾವು ಯಾವುದೇ ಅತಿಕ್ರಮಣ ಮಾಡಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.